ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಎಂ.ಎ ಗೋಪಾಲಸ್ವಾಮಿ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 164
ಉತ್ತರಿಸಬೇಕಾದ ದಿನಾಂಕ : 11.02.2019

	ಪ್ರಶ್ನೆ	ಉತ್ತರ
ಅ.	ಸಹಕಾರ ಇಲಾಖೆಯಿಂದ ಸಾರ್ವಜನಿಕರು ಮತ್ತು ರೈತರಿಗೆ ಅನುಕೂಲವಾಗಲು ರೂಪಿಸಿರುವ ಯೋಜನೆಗಳೇನು; ಈ ಯೋಜನೆಗಳ ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು)	ಸಹಕಾರ ಇಲಾಖೆಯಿಂದ ಸಾರ್ವಜನಿಕರು ಮತ್ತು ರೈತರಿಗೆ ಅನುಕೂಲವಾಗಲು ರೂಪಿಸಿರುವ ಯೋಜನೆಗಳು ಮತ್ತು ಮಾನದಂಡಗಳನ್ನು ಈ ಕೆಳಗೆ ನೀಡಲಾಗಿದೆ. **<u>ರೂ.1 ಲಕ್ಷಗಳ ಸಾಲ ಮನ್ನಾ ಯೋಜನೆ</u>** 1. ಸಹಕಾರ ಸಂಘಗಳಲ್ಲಿ ಅಂದರೆ ಪ್ಯಾಕ್ಸ್, ಡಿಸಿಸಿ ಬ್ಯಾಂಕಿನ ಶಾಖೆಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ.10-7-2018 ಕ್ಕೆ ಹೊರಬಾಕಿ ಹೊಂದಿರಬೇಕು. 2. ಕುಟಂಬಕ್ಕೆ ಗರಿಷ್ಠ ರೂ.1 ಲಕ್ಷಗಳ ವರೆಗೆ ಸಾಲ ಮನ್ನಾ ದೊರೆಯುತ್ತದೆ. 3. ಸಾಲ ಮನ್ನಾ ಸೌಲಭ್ಯವು ರೈತರು ಮರುಪಾವತಿ ಮಾಡಬೇಕಾದ ಗಡುವಿನ ದಿನಾಂಕಕ್ಕೆ ಜಾರಿಗೆ ಬರುತ್ತದೆ. 4. ಕುಟುಂಬದಲ್ಲಿ ಯಾವುದೇ ಸದಸ್ಯನು ರೂ.20000/ ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ ಅಂತಹ ರೈತರಿಗೆ ಈ ಸೌಲಭ್ಯ ದೊರೆಯುವುದಿಲ್ಲ. 5. ದಿ.10-7-2018 ಕ್ಕೆ ಸಾಲವು ಚಾಲ್ತಿ ಇದ್ದು, ರೂ 1 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಹೆಚ್ಚಿನ ಮೊತ್ತವನ್ನು ಗಡುವು ದಿನಾಂಕದೊಳಗೆ ಮರುಪಾವತಿಸಬೇಕು. 6. ದಿ.10-7-2018 ಕ್ಕೆ ಸಾಲವು ಸುಸ್ತಿ ಇದ್ದಲ್ಲಿ ಮಾರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ.1.00ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-3-2019 ರೊಳಗೆ ಮರುಪಾವತಿಸಬೇಕು. 7. ದಿ.10-7-2018 ರಿಂದ ದಿ.30-9-2018 ರ ವರೆಗೆ ಗಡುವು ಬರುವ ಸಾಲಗಳಿಗೆ ಗಡುವು ದಿನಾಂಕದಿಂದ ಸಾಲ ಮರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ.1 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-3-2019 ರೊಳಗೆ ಮರುಪಾವತಿಸತಕ್ಕದ್ದು.

8. ಸಹಕಾರ ಸಂಘಗಳಲ್ಲಿ ಸಾಲ ಮನ್ನಾ ಸೌಲಭ್ಯ ಪಡೆದ ರೈತರಿಗೆ ವಾಣಿಜ್ಯ ಬ್ಯಾಂಕಿನಲ್ಲಿ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ

ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಬೆಳೆ ಸಾಲ ವಿತರಿಸುವ ಯೋಜನೆ

1. ರೈತ ಸದಸ್ಯರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಾಥಮಿಕ ಸದಸ್ಯತ್ವವನ್ನು ಹೊಂದಿರಬೇಕು.
2. ಕೃಷಿ ಸಾಲ ಪಡೆಯಲು ರೈತರು ತಮ್ಮ ಹೆಸರಿನಲ್ಲಿ ಕೃಷಿ ಭೂಮಿ ಹೊಂದಿರಬೇಕು.
3. ಬೆಳೆ ವಿಮೆ ಅಧಿಸೂಚಿಸಿದ ಬೆಳೆಗಳಿಗೆ ಪ್ರೀಮಿಯಂನ್ನು ಕಡ್ಡಾಯವಾಗಿ ಪಾವತಿಸತಕ್ಕದ್ದು.
4. ಸಾಲವನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು.

ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ವಿತರಿಸುವ ಯೋಜನೆ

1. ರೈತ ಸದಸ್ಯರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಪ್ರಾಥಮಿಕ ಸದಸ್ಯತ್ವವನ್ನು ಹೊಂದಿರಬೇಕು.
2. ಕೃಷಿ ಸಾಲ ಪಡೆಯಲು ರೈತರು ತಮ್ಮ ಹೆಸರಿನಲ್ಲಿ ಕೃಷಿ ಭೂಮಿ ಹೊಂದಿರಬೇಕು.
3. ಯೋಜನಾ ವರದಿ ಮತ್ತು ಭೂ ದಾಖಲೆಗಳನ್ನು ಬ್ಯಾಂಕು ನೇಮಿಸದ ಕಾನೂನು ಸಲಹೆಗಾರರಿಂದ ಅಭಿಪ್ರಾಯ ಪಡೆಯಬೇಕು.
4. ಸಾಲದ ಕಂತುಗಳನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು

ಮಹಿಳಾ ಸ್ವಸಹಾಯ ಗುಂಪುಗಳಿಗೆ ಶೂನ್ಯ ಮತ್ತು ಪುರುಷ ಸ್ವಸಹಾಯ ಗುಂಪುಗಳಿಗೆ ಶೇ.4 ರ ಬಡ್ಡಿ ದರದಲ್ಲಿ ಸಾಲ ವಿತರಿಸುವ ಯೋಜನೆ

1. ಸ್ವಸಹಾಯ ಗುಂಪುಗಳನ್ನು ರಚಿಸಿಕನಿಷ್ಠ 6 ತಿಂಗಳಾಗಿದ್ದು, ಉಳಿತಾಯ ಪ್ರವೃತ್ತಿಯನ್ನು ಹೊಂದಿರಬೇಕು.
2. ಡಿಸಿಸಿ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.
3. ಉಳಿತಾಯದ ಪ್ರಮಾಣವನ್ನು ಆಧರಿಸಿ ಸಾಲದ ಮೊತ್ತವನ್ನು ನಿರ್ಧರಿಸಲಾಗುವುದು.
4. ಸಾಲದ ಕಂತುಗಳನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು.

ಬಡವರ ಬಂಧು ಯೋಜನೆ

1. ಫಲಾನುಭವಿಗಳು ಬೀದಿ ವ್ಯಾಪಾರಿಗಳಾಗಿರಬೇಕು.
2. ಬೀದಿ ವ್ಯಾಪಾರಿಗಳು ವ್ಯಾಪಾರ ಮಾಡುತ್ತಿರುವ ಸ್ಥಳದ ಭಾವಚಿತ್ರ ಮತ್ತು ಆಧಾರ್ ಕಾರ್ಡ್‌ನ್ನು ಸಹಕಾರ ಬ್ಯಾಂಕುಗಳಿಗೆ ಸಲ್ಲಿಸಬೇಕು.

ಕಾಯಕ ಯೋಜನೆ

1. ಫಲಾನುಭವಿಗಳು ಸ್ವಸಹಾಯ ಗುಂಪುಗಳ ಸದಸ್ಯರಾಗಿರಬೇಕು.
2. ಸಹಕಾರ ಬ್ಯಾಂಕುಗಳಲ್ಲಿ ಉಳಿತಾಯ ಖಾತೆ ಹೊಂದಿರಬೇಕು.

		3. ಸ್ವಸಹಾಯ ಗುಂಪುಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಯೋಜನೆ ಹೊಂದಿರಬೇಕು. 4. ಸಾಲದ ಕಂತುಗಳನ್ನು ಗಡುವು ದಿನಾಂಕದಗೊಳಗೆ ಮರುಪಾವತಿಬೇಕು. **<u>ವಿವಿಧ ಸಹಕಾರ ಸಂಸ್ಥೆಗಳಲ್ಲಿ ಬಿಪಿಎಲ್/ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ /ಹಿಂದುಳಿದ ಮತ್ತು ಅಲ್ಪಸಂಖ್ಯಾತ ಮಹಿಳೆ/ವಿಕಲಚೇತನರನ್ನು ಸದಸ್ಯರನ್ನಾಗಿ ನೋಂದಾಯಿಸುವ ಬಗ್ಗೆ</u>** 1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಅಲೆಮಾರಿ ಜನಾಂಗದವರನ್ನು ಎಲ್ಲಾ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಷೇರು ಸಹಾಯಧನ ಸರ್ಕಾರದಿಂದ ನೀಡಲಾಗುತ್ತದೆ. 2. ಬಿಪಿಎಲ್ ಕುಟುಂಬದ ಒಬ್ಬ ಸದಸ್ಯರನ್ನು ಪ್ಯಾಕ್ಸ್‌ಗಳಲ್ಲಿ ಮಾತ್ರ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನ ನೀಡಲಾಗುತ್ತದೆ. 3. ಮಹಿಳೆಯವರನ್ನು/ವಿಕಲಚೇತನರನ್ನು ಎಲ್ಲಾ ವಿವಿಧ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಹಾಗೂ ಸದರಿಯವರು ಹೊಸ ಸಹಕಾರ ಸಂಘಗಳನ್ನು ಸ್ಥಾಪಿಸಲು ಸರ್ಕಾರದಿಂದ ಷೇರು ಸಹಾಯಧನವನ್ನು ನೀಡಲಾಗುತ್ತಿದೆ. 4. ಸಂಘದ ಉಪನಿಯಮದನ್ವಯ ಅಥವಾ ಗರಿಷ್ಠ 500/-ವರೆಗೆ ಮಂಜೂರು ಮಾಡಲಾಗುತ್ತದೆ. **<u>ಯಶಸ್ವಿನಿ ಯೋಜನೆ</u>** 1. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ಗ್ರಾಮೀಣ ಸ್ವ-ಸಹಾಯ ಗುಂಪುಗಳ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರು ನವೀಕರಿಸಲು/ ನೋಂದಾಯಿಸಲು ಅರ್ಹರಾಗಿರುತ್ತಾರೆ. 2. 2017-18ನೇ ಸಾಲಿಗೆ ಯಶಸ್ವಿನಿ ಸಹಕಾರ ರೈತರ ಆರೋಗ್ಯ ರಕ್ಷಣಾ ಯೋಜನೆಯ ವಾರ್ಷಿಕ ವಂತಿಗೆಯನ್ನು ಪ್ರತಿಯೊಬ್ಬರಿಗೆ ರೂ.300/-ಕ್ಕೆ ನಿಗದಿಗೊಳಿಸಲಾಗಿದೆ. ಈ ಯೋಜನೆಯ ಪ್ರಯೋಜನ ಪಡೆಯಲು ಪ್ರಧಾನ ಅರ್ಜಿದಾರರು ಮತ್ತು ಅವರ ಕುಟುಂಬದ ಉದ್ದೇಶಿಸಿದ ಪ್ರತಿಯೊಬ್ಬ ಸದಸ್ಯರಿಗೆ ಕಡ್ಡಾಯವಾಗಿ ರೂ.300/- ವಂತಿಗೆ ಪಾವತಿ ಮಾಡಬೇಕು. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದವರು ವಾರ್ಷಿಕ ವಂತಿಗೆ ರೂ.50/-ನ್ನು ಪಾವತಿಸಬೇಕು ಉಳಿದ ರೂ.250/-ನ್ನು ಸರ್ಕಾರದ ವತಿಯಿಂದ ಸಹಾಯಧನವಾಗಿ ಪಾವತಿಸಲಾಗುವುದು. 3. ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ವಯೋಮಿತಿಯ ನಿರ್ಬಂಧವು ಇರುವುದಿಲ್ಲ. 4. ಪ್ರತಿ ವರ್ಷ ಸದಸ್ಯರು ವಾರ್ಷಿಕ ವಂತಿಗೆಯನ್ನು ಪಾವತಿಸಿ ನವಿಕರಿಸಿಕೊಳ್ಳಬೇಕಾಗಿರುತ್ತದೆ. ನವಿಕರಿಸಕೊಳ್ಳದಿದ್ದಿಲ್ಲಿ ಹೊಸದಾಗಿ ಕಾರ್ಡ್ ಪಡೆಯತಕ್ಕದ್ದು.
ಆ)	ಸಹಕಾರ ಇಲಾಖೆಯಿಂದ ರೂಪಿಸಿರುವ ಈ ಯೋಜನೆಗಳಿಗಾಗಿ ಕಳೆದ 2 ವರ್ಷಗಳಲ್ಲಿ ಹಾಸನ ಜಿಲ್ಲೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು? ಖರ್ಚಾದ	ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ

	ಅನುದಾನವೆಷ್ಟು? ಯಾವ ಯೋಜನೆಗೆ ಎಷ್ಟು ಅನುದಾನ ಖರ್ಚಾಗಿದೆ(ತಾಲ್ಲೂಕುವಾರು ಮಾಹಿತಿ ನೀಡುವುದು)	
ಇ)	ಈ ಯೋಜನೆಗಳ ಅನುಕೂಲ ಪಡೆಯಲು ಕಳೆದ 2 ವರ್ಷಗಳಲ್ಲಿ ಎಷ್ಟು ಅರ್ಜಿಗಳು ಸ್ವೀಕೃತವಾಗಿವೆ. ಅನುಕೂಲ ಪಡೆದ ಮತ್ತು ಪಡೆಯದ ಫಲಾನುಭವಿಗಳೆಷ್ಟು? (ತಾಲ್ಲೂಕುವಾರು ಮತ್ತು ಯೋಜನಾವಾರು ವಿವರ ನೀಡುವುದು)	ಮಾಹಿತಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ

ಸಂಖ್ಯೆ: ಸಿಒ 24 ಸಿಎಲ್‌ಎಸ್ 2019

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು.